9-30A.M.

ಶ್ರೀ ಬಿ. ಹುಚ್ಚೇಗೌಡ.—ಇಲ್ಲಿ ಕೊನೆಯ ಪುಟದಲ್ಲಿ (3) ನೆಯ ನಂಬರಿನ ಗರ್ಲ್ಸ್ ಹೈಸ್ಕೂಲಿಗೆ ತಿಂಗಳಿಗೆ 40 ರೂಪಾಯಿಗಳನ್ನು ಕೊಡುತ್ತಿದೆಯೆಂದು ಹೇಳಿದೆ. Is it rndering any medical aid?

Sri T. CHANNIAH.—Yes.

ಶ್ರೀ ಬಿ. ಹುಚ್ಚೇಗೌಡ.—ಗರ್ಲ್ಸ್ ಹೈಸ್ಕೂಲು ಯಾವ ರೀತಿ ವೈದ್ಯ ಸಹಾಯ ನೀಡುತ್ತಿದೆ?

ಶ್ರೀ ಟಿ. ಚನ್ನಯ್ಯ.—ಅದಕ್ಕೊಂದು ಮೆಡಿಕಲ್ ಇನ್‌ಸ್ಪಿಟ್ಯೂಷ್ ಸೇರಿರುವುದರಿಂದ ಕೊಡುತ್ತಿದೆ.

SHORT NOTICE QUESTION AND ANSWER.

Non-supply of water to some parts of Bangalore City.

Q.—13. Sri V. VENKATAPPA (Channapatna).—

Will the Government be pleased to state:—

(*a*) whether they are aware of the fact that for the past three days citizens of Bangalore are put to hardship on account of non-supply of water to some parts of the City;

(*b*) whether they are aware of the reasons for non-supply of water; if so, the reasons;

(*c*) The action taken by them to prevent such hardship occurring on account of failure in water supply?

A.—Sri KADIDAL MANJAPPA (Minister for Revenue and Public Works).—

(*a*) The higher portions of Basavangudi to the South of Sir M. N. Krishna Rao Park suffered for want of water supply from 4 P.M. on 22nd March 1953 to 2 P.M. on 23rd March 1953.

(*b*) This was due to a burst in the main near the Madras Railway Level Crossing.

(*c*) The main was set right within 4½ hours after the trouble was noticed and normal supply was resumed.

ಶ್ರೀ ವಿ. ವೆಂಕಟಪ್ಪ.—(ಎ) ಪ್ರಶ್ನೆಗೆ ಉತ್ತರದಲ್ಲಿ ಇದನ್ನು ರಿಪೇರಿ ಮಾಡುವುದರಲ್ಲಿ 22 ಗಂಟೆಗಳಾಯಿತೆಂದು ಹೇಳಿದ್ದೀರಿ. ಆದರೆ (ಸಿ) ಪ್ರಶ್ನೆಗೆ ಉತ್ತರ 4½ ಘಂಟೆಗಳ ಕಾಲದಲ್ಲಿಯೇ ನೀರು ಕೊಡುವುದಕ್ಕೆ ಏರ್ಪಾಡು ಮಾಡಲಾಯಿತೆಂದು ಹೇಳಿದ್ದೀರಿ. ಇದು ಹೇಗೆ ಸರಿ?

ಶ್ರೀ ಕಡಿದಾಳ್ ಮಂಜಪ್ಪ.— 4½ ಗಂಟೆಗಳ ಕಾಲದಲ್ಲಿ ರಿಪೇರಿ ಮಾಡಲಾಯಿತು.

ಶ್ರೀ ವಿ ವೆಂಕಟಪ್ಪ.—(ಎ)ಭಾಗದಲ್ಲಿ 22-3-1953 ನೆಯ ತಾರೀಖಿನ ಸಾಯಂಕಾಲ 4 ಗಂಟೆಯಿಂದ ತಾರೀಖು 23-3-1953ರ ಪರ್ಯಾಹ್ನ 2 ಗಂಟೆಗಳ ವರೆಗೆ ನೀರಿರಲಿಲ್ಲವೆಂದು ಹೇಳಿದ್ದೀರಿ. ಆದರೆ ಸಿ) ಭಾಗದಲ್ಲಿ 4½ ಗಂಟೆಗಳೊಳಗೇ ಸರಿಪಡಿಸಲಾಯಿತೆಂದು ಹೇಳಿದ್ದೀರಿ, ಇದು ಹೇಗೆ?

Sri KADIDAL MANJAPPA.—After trouble was noticed, it was set right within a period of 4½ hours.

ಶ್ರೀ ವಿ. ವೆಂಕಟಪ್ಪ.— ಈ 22 ಗಂಟೆಗಳ ಕಾಲ ನೀರಿಲ್ಲದೆ ಹೋಗಿದ್ದ ಸಂದರ್ಭದಲ್ಲಿ ಅವರಿಗೆ ನೀರಿಗೆ ಯಾವ ಏರ್ಪಾಡು ಮಾಡಿ ಒದಗಿಸಲಾಯಿತು?

ಶ್ರೀ ಕಡಿದಾಳ್ ಮಂಜಪ್ಪ.— ನೀರೇ ಇಲ್ಲದಿರುವಾಗ ಹೇಗೆ ಸರಬರಾಯಿ ಮಾಡುವುದಕ್ಕಾಗುತ್ತದೆ?

ಶ್ರೀ ವಿ. ವೆಂಕಟಪ್ಪ.— ನಾನು ಹೇಳಲೇ? ತಮ್ಮ ಹತ್ತಿರ ರಾತ್ರಿಗಳಿರಲಿಲ್ಲವೇ? ರಾತ್ರಿಗಳ ಮೂಲಕ ಏರ್ಪಾಡು ಮಾಡುವುದಕ್ಕಾಗುತ್ತಿರಲಿಲ್ಲವೇ? ಅದರಲ್ಲೂ 23ನೆಯ ತಾರೀಖು ಹಬ್ಬವೆಂಬುದು ತಮಗೆ ಗೊತ್ತಿರಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.— ಹಬ್ಬವಿರಬಹುದು. ಆದರೆ ಅನಿರೀಕ್ಷಿತವಾಗಿ ಹೀಗಾದರೆ ಏನು ಮಾಡುವುದಕ್ಕಾಗುತ್ತದೆ? ಅಧಿಕಾರಿಗಳ ಗಮನಕ್ಕೆ ಬಂದ 4½ ಗಂಟೆಗಳ ಕಾಲದಲ್ಲಿಯೇ ನೀರನ್ನು ಒದಗಿಸುವುದಕ್ಕೆ ಸಾಧ್ಯವಾಗಿದೆ.

ಶ್ರೀ ವಿ. ವೆಂಕಟಪ್ಪ.— ಇದಕ್ಕೆ ಮುಂಚೆ ತಮಗೆ ನೀರಿಗೆ ತೊಂದರೆಯಾಗಿದೆಯೆಂದು ಯಾರೂ ತಮ್ಮ ಗಮನಕ್ಕೆ ತರಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.— ಇಲ್ಲ.

ಶ್ರೀ ವಿ. ವೆಂಕಟಪ್ಪ.— ನ ನೇ ಸಂಬಂಧಪಟ್ಟ ಅಧಿಕಾರಿಗಳಿಗೆ ಎಷ್ಟೋ ದಿವಸ ಈ ರೀತಿಯಾದ ತೊಂದರೆಗಳನ್ನು ತಂದಿದ್ದರೂ ಅದು ತಮ್ಮ ಗಮನಕ್ಕೆ ಬರಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.— ನನ್ನ ಗಮನಕ್ಕೆ ಬರಲಿಲ್ಲ.

ಶ್ರೀ ವಿ. ವೆಂಕಟಪ್ಪ.— ಅವರು ಏಕೆ ಹೇಳಲಿಲ್ಲ? ಅವರ ಗಮನಕ್ಕೆ ಬಂದರೂ ಸಂಬಂಧಪಟ್ಟ ಅಧಿಕಾರಿಗಳು ತಮಗೆ ತಿಳಿಸಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.— ಅವರ ಗಮನಕ್ಕೆ ಬಂದಿದ್ದರೆ ತಿಳಿಸುತ್ತಿದ್ದರು; ಪ್ರಾಯಶಃ ಅವರ ಗಮನಕ್ಕೆ ಬಂದಿಲ್ಲ. ಅಲ್ಲದೆ ಅವರ ಗಮನಕ್ಕೆ ಬಂದ ನಾಲ್ಕು ಗಂಟೆಗಳೊಳಗೇ ಸರಿಪಡಿಸಿ ನೀರನ್ನೊದಗಿಸಲಾಗಿದೆಯೆಂದು ಹೇಳಿದ್ದೇನೆ.

ಶ್ರೀ ವಿ. ವೆಂಕಟಪ್ಪ.— ಕೆಲವು ಭಾಗಗಳಿಗೆ ಅಕಸ್ಮಾತ್ತಾಗಿ ಹೀಗಾಗಿರುವುದೇ ಅಲ್ಲದೆ ಸಾಮಾನ್ಯವಾಗಿ ಈಗಲೂ ಅಲ್ಲಿ ತೊಂದರೆಯಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.— ಕೆಲವು ಕಡೆ ಸ್ವಲ್ಪ ತೊಂದರೆಯಿದೆ.

ಶ್ರೀ ವಿ. ವೆಂಕಟಪ್ಪ.— ಸ್ವಲ್ಪ ತೊಂದರೆಯಲ್ಲ! ರಾತ್ರಿ ಒಂದು ಗಂಟೆಯ ಸಮಯದಲ್ಲಿ ಸ್ವಲ್ಪ ಹೊತ್ತು ಬಿಟ್ಟು ಉಳಿದ ಎಲ್ಲ ಕಾಲಗಳಲ್ಲೂ ನೀರಿಲ್ಲದೆ ಹೀಗೆ

ಯೇ ತೊಂದರೆಯಾಗುತ್ತಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

Sri KADIDAL MANJAPPA.— That is a general question. It does not arise out of this.

ಶ್ರೀ ವಿ. ವೆಂಕಟಪ್ಪ.— ಆ ಪ್ರಾಂತ್ಯದಲ್ಲಿ ಇನ್ನೂ ತೊಂದರೆಯಿದ್ದೇ ಇದೆಯೆಂದು ನಾನೀಗ ತಮ್ಮ ಗಮನಕ್ಕೆ ತಂದಿದ್ದೇನೆ. ಅದನ್ನು ಸರಿಪಡಿಸಲಿಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.— ಇದಕ್ಕೆ ಸಂಬಂಧಪಟ್ಟ ಹಾಗೆಯೇ ಒಂದು Water Supply Scheme ಇದೆ. ಅದೀಗ ಸರ್ಕಾರದ ಪರ್ಯಾಲೋಚನೆಯಲ್ಲಿದೆ. ಮುನಿಸಿಪಾಲಿಟಿಯವರಿಗೂ ಸರ್ಕಾರದವರಿಗೂ ಮುನಿಸಿಪಾಲಿಟಿಯವರು ಹೆಚ್ಚಿಗೆ Water Rate ಕೊಡಬೇಕೆಂಬ ವಿಷಯದ ಮೇಲೆ ಭಿನ್ನಾಭಿಪ್ರಾಯ ಬಂದಿದೆ. ಸಾಧ್ಯವಾದಷ್ಟು ಮಟ್ಟಿಗೆ ಬೇಗ ಇತ್ಯರ್ಥಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ವಿ. ವೆಂಕಟಪ್ಪ.— ಸರ್ಕಾರದವರಿಗೂ ಮುನಿಸಿಪಾಲಿಟಿಯವರಿಗೂ ಭಿನ್ನಾಭಿಪ್ರಾಯ ಎಷ್ಟು ವರ್ಷಗಳಿಂದ ಇದೆ ?

ಶ್ರೀ ಕಡಿದಾಳ್ ಮಂಜಪ್ಪ.— ಎರಡು ಮೂರು ವರ್ಷಗಳಿಂದ.

ಶ್ರೀ ವಿ. ವೆಂಕಟಪ್ಪ.— ಎರಡು ಮೂರು ವರ್ಷಗಳಾದರೂ ಜನರು ಈ ತೊಂದರೆಯನ್ನ ಅನುಭವಿಸಿಕೊಂಡಿರಬೇಕೇ ?

ಶ್ರೀ ಕಡಿದಾಳ್ ಮಂಜಪ್ಪ.— ಮುನಿಸಿಪಾಲಿಟಿಯವರು ಮನಸ್ಸು ಮಾಡಬೇಕು. ಮುನಿಸಿಪಾಲಿಟಿಯವರ ಜವಾಬ್ದಾರಿ ಅದು.

ಶ್ರೀ ವಿ. ವೆಂಕಟಪ್ಪ.— ಮುನಿಸಿಪಾಲಿಟಿಯವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸದೆ ಇದ್ದರೆ?

ಶ್ರೀ ಕಡಿದಾಳ್ ಮಂಜಪ್ಪ.— ಆಗ ಕಾನೂನು ಪ್ರಕಾರ ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಬೆಂಗಳೂರು ಸಿಟಿಗೆ ಕೆಲವು ಕಾಲಗಳಲ್ಲಿ ಸಪ್ಲೈ ಆಗುತ್ತಿದೆ, ಕೆಲವು ಕಾಲಗಳಲ್ಲಿ ಸಪ್ಲೈ ಆಗುತ್ತಿಲ್ಲ ವೆಂದು ಹೇಳಿದ್ದೀರಿ. ಯಾವಾಗಲೂ ಸಪ್ಲೈ ಆಗುತ್ತಿಲ್ಲವೆಂದು ತಮ್ಮ ವಾದವಲ್ಲ.

ಶ್ರೀ ವಿ. ವೆಂಕಟಪ್ಪ.— ಕೆಲವು ಕಡೆಗಳಲ್ಲಿ ನೀರಿನ ತೊಂದರೆಯಿದೆಯೆಂದು ತಾವೇ ಹೇಳಿದಿರಿ. ಆ ತೊಂದರೆಯನ್ನು ಹೋಗರಾಡಿಸುವುದು ಸರ್ಕಾರದವರ ಕರ್ತವ್ಯವಲ್ಲವೇ !

ಶ್ರೀ ಕಡಿದಾಳ್ ಮಂಜಪ್ಪ.— ನಮ್ಮ ಕರ್ತವ್ಯ ನಾವು ನಿರ್ವಹಿಸಿದ್ದೇವೆ.

ಶ್ರೀ ವಿ. ವೆಂಕಟಪ್ಪ.— ತಮ್ಮ ಕರ್ತವ್ಯ ತಾವು ನಿರ್ವಹಿಸಿದ್ದರೆ ಹೀಗೆ ತೊಂದರೆಯಿರುವುದೇ ?

ಶ್ರೀ ಕಡಿದಾಳ್ ಮಂಜಪ್ಪ.— ಈ ಬಗ್ಗೆ ಮುನಿಸಿಪಾಲಿಟಿಯವರು ಜಾಗ್ರತೆ ಒಪ್ಪಿಕೊಂಡರೆ ನಾವೂ ಬೇಗ ಮಾಡಬೇಕೆಂದಿದ್ದೇವೆ.

ಶ್ರೀ ವಿ. ಆರ್. ನಾಯ್ಡು.— 1952ನೆಯ ಇಸವಿಯಲ್ಲೇ ಈ ಸ್ಕೀಮನ್ನು ಮುನಿಸಿಪಾಲಿಟಿಯವರು ಒಪ್ಪಲಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.— ಇಲ್ಲ.

ಶ್ರೀ ವಿ. ಆರ್. ನಾಯ್ಡು.— ಒಪ್ಪಿಕೊಂಡಿದ್ದರೆ, ಕೂಡಲೆ ಕಾರ್ಯಕ್ರಮ ಕೈಗೆಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.— ಒಪ್ಪಿಕೊಂಡಿದ್ದರೆ ಆಗಲೇ ಮಾಡುತ್ತಿದ್ದೆವು.

ಶ್ರೀ ಆರ್. ಅನಂತರಾಮ್.— ಸಿಟಿಗೆ ಸ್ವೇಷ್ಟ ಪ್ರದೇಶದಲ್ಲಿ ನೀರಿಲ್ಲದೆ ಬಹಳ ಕಷ್ಟಪಡುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.— ಕೆಲವು ಪ್ರದೇಶಗಳಲ್ಲಿ ಎರಡ್ಮೂರು ಕಾಲಗಳಲ್ಲಿಯೂ ನೀರು ಬರುವುದಿಲ್ಲವೆಂದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಆರ್. ಅನಂತರಾಮ್.—ಹಾಗಾದರೆ ಇಡೀ ಬೆಂಗಳೂರಿನ ದೃಷ್ಟಿಯಿಂದ ಈ ಸ್ಕೀಮನ್ನು ಕೂಡಲೇ ತೆಗೆದುಕೊಂಡು ಚೆನ್ನಾಗಿ ಎರಡ್ಮೂರು ಕಡೆಗೂ ನೀರು ಸಪ್ಲೈ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

(No answer.)

ಶ್ರೀ ಪಿ ಆರ್. ರಾಮಯ್ಯ.— ಈಗಿರುವ ಸ್ಥಿತಿಯಲ್ಲಿ ಬೆಂಗಳೂರು ಸಿಟಿಗೆ ನೀರು ಸರಬರಾಯಿ ಮಾಡುವುದು ಸರ್ಕಾರದವರ ಜವಾಬ್ದಾರಿಯಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.— ಅದು ಸರ್ಕಾರದವರ ಜವಾಬ್ದಾರಿಯೇನೋ ಹೌದು; ಆದರೆ ವಾಟರ್ ವರ್ಕ್ಸ್‌ನ್ನು ಇಟ್ಟುಕೊಳ್ಳುವ ಜವಾಬ್ದಾರಿ ಮುನಿಸಿಪಾಲಿಟಿಯವರಿಗೂ ಸೇರಿದೆ.

ಶ್ರೀ ಎಸ್. ಸಿದ್ದಪ್ಪ.— ಮುನಿಸಿಪಾಲಿಟಿಯವರು ಸರ್ಕಾರದಲ್ಲಿ ನೀರು ಸರಬರಾಯಿ ಮಾಡದೆ ಇದ್ದರೆ ಅವರ ಮೇಲ್ಪಟ್ಟ ಅಧಿಕಾರ ಸರ್ಕಾರದ್ದಲ್ಲವೇ ?

Sri KADIDAL MANJAPPA.— It is a question of interpretation of the Municipal Act.

ಶ್ರೀ ಎಸ್. ಸಿದ್ದಪ್ಪ.— ಮುನಿಸಿಪಾಲಿಟಿಯವರು ಯಾವಾಗಲೂ ಸರ್ಕಾರದ ಅಧೀನದಲ್ಲರುವುದರಿಂದ ತಕ್ಷಣ ಈ ಅನಾನುಕೂಲತೆಯನ್ನು ತಪ್ಪಿಸುವುದಕ್ಕೆ ಸರ್ಕಾರದವರು ಪ್ರಯತ್ನಪಡುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.— ಎರ್ಲಾ ವಿಧದಲ್ಲೂ ಸರ್ಕಾರದ ಅಧೀನವೆಂದು ಹೇಳುವುದಕ್ಕಾಗುವುದಿಲ್ಲ. ಕಾನೂನು ಪ್ರಕಾರ ಅವರ ಅಧಿಕಾರವೇನು, ಸರ್ಕಾರದ ಅಧಿಕಾರವೇನು ಎಂಬುದು ವಿಧಾಯಕವಾಗಿದೆ.

ಶ್ರೀ ಕೆ. ಪುಟ್ಟಸ್ವಾಮಿ.— ಈ ತೊಂದರೆಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಬಾವಿ ತೆಗೆಯಿಸಿಕೊಳ್ಳುತ್ತೇವೆಂದರೆ ಸಬ್‌ವೆಷ್ಟ್ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.— ಆ ಸಲಹೆಯನ್ನು ಯೋಚನೆ ಮಾಡುತ್ತೇವೆ.

ಶ್ರೀ ಡಿ. ವೆಂಕಟೇಶ್.— ಮುನಿಸಿಪಾಲಿಟಿಯವರು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳದೆ ಇದ್ದು ಜನತೆ ನೀರಿಗಾಗಿ ಅವರಮೇಲೆ ದಂಗೆ ಎದ್ದಾಗ ಸರ್ಕಾರ ಅವರ ಮೇಲೆ ಕಾರ್ಯಕ್ರಮ ಕೈಗೊಳ್ಳುತ್ತಾರೆಯೇ ?

QUESTIONS FOR ANSWERS ON THE DAY
(But not taken up).

Collection of Paddy in Hassan District.

Q.—280. Sri K. LAKKAPPA (Channarayapatna).—

Will the Government be pleased to state :—

(*a*) the target fixed in Hassan District for the last five years regarding the collection of paddy (target